ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಾಪಸ್ ತೆಗೆದುಕೊಳ್ಳುವುದು ಬಿಡುವುದು ನಮಗೆ ಸೇರಿದ್ದು. ಎಷ್ಟು ಹಣ ಖರ್ಚುಮಾಡುವುದಕ್ಕೆ ಅಪ್ಪಣೆ ಕೊಡುತ್ತೇವೆ ಎಂದು ಹೇಳಿದ ಮೇಲೆ ಯಾತಕ್ಕೆ ವಾಪಸ್ ತೆಗೆದುಕೊಂಡಿರಿ ಎಂದು ನೀವು ಕೇಳುವುದಕ್ಕೆ ಬರುವುದಿಲ್ಲ ಮೊದಲು ಕೊಟ್ಟಿದ್ದ ಮಾತಿನ ಪ್ರಕಾರ ಖರ್ಚು ಮಾಡುತ್ತೇವೆ. ನಮ್ಮ ಇಷ್ಟ ಬಂದಾಗ ಹಣ ತೆಗೆದುಕೊಳ್ಳುತ್ತೇವೆ, ಇಷ್ಟ ಬಂದಾಗ ಕೊಡುತ್ತೇವೆ ಖರ್ಚು ಮಾಡುವುದು ಮುಖ್ಯ. ಅದನ್ನು ಕ್ವಶ್ಚನ್ ಮಾಡುತ್ತಾ ಹೋದರೆ ನಾನು ಉತ್ತರ ಕೊಡುವುದು ಹೇಗೆ ?

Affairs of the Corporation

ಶ್ರೀ ಕೆ ಎಂ. ನಾಗಣ್ಣ (ಚಿಕ್ಕಪೇಟೆ)—ನಾನು ಒಂದು ತಿಂಗಳ ಕೆಳಗೆ ಫಿಲಮ್ ಕಾರ್ಪೊರೇಷನ್ ಬಗ್ಗೆ ಒಂದು ಪ್ರಶ್ನೆ ಕಳುಹಿಸಿದ್ದೆ.

ಅಧ್ಯಕ್ಷರು—ಬಂಗಾರಪ್ಪನವರು ಹಾಜರು ಇರಲಿಲ್ಲ. ಆ ಪ್ರಶ್ನೆ ಹೊರಟು ಹೋಯಿತು. ಆಮೇಲೆ ತಾವು ಪ್ರಶ್ನೆ ಕೇಳಬಹುದಿತ್ತು.

ಶ್ರೀ ಕೆ ಎಂ ನಾಗಣ್ಣ.—ಬಂಗಾರಪ್ಪನವರ ಪ್ರಶ್ನೆಯೊಳಗೆ ಅದು ಬರಲಿಲ್ಲ. ಈ ಪ್ರಶ್ನೆ ನಾನೆ ಬೇರೆ ಕಳುಹಿಸಿದ್ದೇನೆ ಇದು ಬಹಳ ಪ್ರಾಮುಖ್ಯವಾದುದು ೫೦ ಲಕ್ಷ ರೂಪಾಯಿ ಬಂಡವಾಳ ಸರ್ಕಾರದ್ದು ಅದರಲ್ಲಿ ಬಿದ್ದಿರಬೇಕಾದರೆ, ಪಬ್ಲಿಕ್ ಇಂಟರೆಸ್ಟ್‌ನಿಂದ ಪ್ರಶ್ನೆ ಕೇಳಿದರೆ ಸರ್ಕಾರ ಉತ್ತರ ಕೊಡದೆ ಇರುವುದಕ್ಕೆ ಕಾರಣಗಳು ಕೊಟ್ಟಿಲ್ಲ. ಇದರಲ್ಲಿ ಏನೋ ಮರ್ಮ ಇರಬೇಕು, ಅನ್ಯಾಯ ನಡೆಯುತ್ತಾ ಇರಬೇಕು, ದಯವಿಟ್ಟು ನನ್ನ ಈ ಒಂದು ಪ್ರಶ್ನೆಗೆ ಉತ್ತರ ಕೊಡಿಸಬೇಕು ಎಂದು ತಮ್ಮ ಮುಖಾಂತರ ಸರ್ಕಾರವನ್ನು ಪ್ರಾರ್ಥಿಸುತ್ತೇನೆ. ಉತ್ತರ ಏತಕ್ಕೆ ಕೊಡುವುದಿಲ್ಲ ಎಂದು ಸರ್ಕಾರವನ್ನು ದಬಾಯಿಸಿ ಬೇಕಾದ್ದು ತಮ್ಮ ಕರ್ತವ್ಯ.

ಅಧ್ಯಕ್ಷರು. ಪ್ರಶ್ನೆಗಳಿಗೆ ಉತ್ತರ ಬಂದಿದೆಯೋ ಇಲ್ಲವೋ ಅದು ಬೇರೆ ವಿಚಾರ. ಎರಡನೆಯದಾ ಪ್ರಶ್ನೆಗಳನ್ನು ತೆಗೆದುಕೊಳ್ಳಬಾರದು ಎಂದು ತೀರ್ಮಾನ ಮಾಡಿರುವಾಗ ನಾನು ಏತಕ್ಕೆ ಹಿಂದಕ್ಕೆ ಹೋಗಬೇಕು ?

ಶ್ರೀ ಬಿ. ಪುಟ್ಟಸ್ವಾಮಯ್ಯ — ಕಾಲ್ ಅಟೆನ್‌ಷನ್ ನೋಟೀಸ್‌ಗೆ ಇಷ್ಟೇ ದಿವಸಗಳಲ್ಲಿ ಉತ್ತರ ಕೊಡಬೇಕು ಎಂದು ನಿಗದಿಮಾಡಬೇಕು. ಅವರ ಪ್ರಶ್ನೆಗೆ ಉತ್ತರಕೊಡದೆ ಇದ್ದರೆ ಹೇಗೆ ? ಕಾಲ್ ಅಟೆನ್‌ಷನ್ ನೋಟೀಸ್‌ಗೆ ಇಷ್ಟು ದಿವಸಗಳಲ್ಲಿ ಉತ್ತರ ಕೊಡಬೇಕು ಎಂದು ಒಂದು ಕಾಲ ತಾವು ನಿಗದಿ ಮಾಡಿ. ಇಲ್ಲದಿದ್ದರೆ ಅವರು ಅನಾದರಣೆ ಮಾಡುತ್ತಾರೆ.

ಅಧ್ಯಕ್ಷರು.—ತಾವು ಹೇಳುವುದರಲ್ಲಿ ಅರ್ಧ ಸತ್ಯ ಇದ್ದರೂ ಅರ್ಧ ಸತ್ಯಕ್ಕೆ ದೂರವಾದುದು ಇದೆ. ನಾವು ದಿವಸಕ್ಕೆ ೩ ಕಾಲ್ ಅಟೆನ್‌ಷನ್ ನೋಟೀಸುಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಸರ್ಕಾರ ಅನಾದರಣೆ ತೋರಿಸುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ—ಎರಡು ತಿಂಗಳಾದರೂ ಸಹ ನನ್ನ ಪ್ರಶ್ನೆಗೆ ಉತ್ತರ ಬಾರದೆ ಇದ್ದಲ್ಲಿ ಅದನ್ನು ಕೇಳಿ ಪ್ರಯೋಜನವೇನು ?

ಶ್ರೀ ಕೆ. ಎಂ. ನಾಗಣ್ಣ—ನನ್ನ ಪ್ರಶ್ನೆ ಕಳೆದು ಏನಾಯಿತೆಂ ಸೆಕ್ರೆಟರಿಯವರಿಗೆ ತಿಳಿಸುವುದಕ್ಕೆ ಸಾಧ್ಯವಿದ್ದರೆ ತಿಳಿಸುತ್ತೀರಾ ?

Fee Concessions to Students in Drought Affected Areas.

ಶ್ರೀ ವಿ. ಎಸ್. ಪಾಟೀಲ್ (ಹುಮ್ನಾಬಾದ್)—ಪಿ.ಡಬ್ಲ್ಯೂ.ಡಿ ಮಂತ್ರಿಗಳ ಹತ್ತಿರ ವಿದ್ಯಾರ್ಥಿಗಳ ಫೀಸಿನ ಬಗ್ಗೆ ಹೇಳಿದೆವು ವಿದ್ಯಾರ್ಥಿಗಳು ಎಕ್ಸಾಮಿನೇಷನ್‌ಗೆ ಕೂತಕೊಳ್ಳದೆ ಇರುವ ಸನ್ನಿವೇಶ ಬಂದಿದೆ. ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಪರೀಕ್ಷೆ ಹಣ ಕಟ್ಟಬೇಕು ಹಣ ಕಟ್ಟುವುದಕ್ಕೆ ಕೊನೆಯ ದಿವಸ ೧೫ನೇ ತಾರೀಖು ಆಗುತ್ತದೆ. ಫಸ್ಟ್ ಟರಮ್, ಸೆಕೆಂಡ್ ಟರಮ್ ಫೀಸ್ ಕಟ್ಟುವುದಕ್ಕೆ ಸಾಧ್ಯವಿಲ್ಲದ ಕಾರಣ ತಮಗೆ ರಿಪೋರ್ಟು ಮಾಡುತ್ತಿದ್ದೇವೆ. ಮಾನ್ಯ ಮಂತ್ರಿಗಳು ತಾವು ನಾಲ್ಕು ಗಂಟೆಗೆ ಕಛೇರಿಗೆ ಒನ್ನು ಕೂಲಂಕಷವಾಗಿ ವಿಚಾರ ಮಾಡಿ ಒಂದು ತೀರ್ಮಾನಕ್ಕೆ ಬರೋಣ ಎಂದು ಹೇಳಿದರು. ಮೂರು ಗಂಟೆಗಳ ಕಾಲ ಕೂತಿದ್ದರೂ ನಿರ್ಣಯ ಏನೂ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ.